ಪ್ರಧಾನ   ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ನ್ಯಾಯಾಲಯ , ಹೊನ್ನಾಳಿ.

ಸಿ.ಸಿ.506/2018

| | | |
|---|---|---|
| ಹೆಸರು | ಮಹಾದೇವಯ್ಯ | ಸಿಡಬ್ಲೂ ಃ1 |
| ತಂದೆಯ ಹೆಸರು | ಸಿದ್ದಲಿಂಗಯ್ಯ | ಪಿಡಬ್ಲೂ ಃ1 |
| ವಯಸ್ಸು | 62 | ದಿಃ 03-08-2021 |
| ವೃತ್ತಿ | ವ್ಯವಸಾಯ | |
| ವಾಸಸ್ಥಳ | ಬಾತಿ | |
| ಮುಖ್ಯವಿಚಾರಣೆ | ಎ ಪಿ ಪಿ ರವರಿಂದ | |

ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ದಿಃ 29-08-2017 ರಂದು ನನ್ನ ಮಗ ಸಿದ್ದಲಿಂಗಯ್ಯ ಮತ್ತು  ಆತನ ಹೆಂಡತಿ ದೀಪ ರವರು ನಿಂಬೆಗುಂದಿ ಗ್ರಾಮಕ್ಕೆ ಹೋಗಿ ವಾಪಾಸ್ಸು ಬರಬೇಕಾದರೆ ಬೆಳಗ್ಗೆ 9.30 ಗಂಟೆಗೆ ಬೈಕ್ ನಲ್ಲಿ ಬರುತ್ತಿದಾಗ ಅಪೆ ಆಟೋ ಮುಂದೆಯಿಂದ ಬಂದು ಡಿಕ್ಕಿಪಡಿಸಿತರುತ್ತದೆ . ಆಗ ನನ್ನ ಮಗನಿಗೆ ಗಾಯವಾಗಿರುತ್ತದೆ .ಗಣೇಶ ಎಂಬುವವರು ನನಗೆ ಫೋನ್ ಮಾಡಿ  ಅಪಘಾತದ ಬಗ್ಗೆ ತಿಳಿಸಿದರು . ಆತನನ್ನು ದಾವಣಗೆರೆ ಚಿಗಟೇರಿ ಆಸ್ಪತ್ರೆಗೆ ಆಂಬ್ಯುಲೆನ್ಸ್ ನಲ್ಲಿ ಕರೆದುಕೊಂಡು ಹೋಗಲಾಯಿತು. ಭರಮಪ್ಪ ಎಂಬುವವರು ಸದರಿ ಆಟೋ ಚಾಲಕನಾಗಿದ್ದ ಎಂದು ಗಣೇಶ ಮತ್ತು ಅಣ್ಣತಮ್ಮಂದಿರಿಂದ ತಿಳಿದು ಬಂದಿರುತ್ತದೆ .  ನನ್ನ ಮಗ ದಾರಿಯಲ್ಲಿ ತೀರಿಕೊಂಡಿಅಸಲು ದಾವಾ ಸಂಖ್ಯೆ .

ಪಿ.ಡಬ್ಲ್ಯೂ-

ದಿಃ

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆ  ವಾದಿ ಪರ ವಕೀಲರಿಂದ ಃ-

ನಾನು ಈ ಪ್ರಕರಣದಲ್ಲಿ  ವಾದಿ ಇದ್ದು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಪ್ರಮಾಣೀಕರಿಸಿ ನ್ಯಾಯಾಲಯಕ್ಕೆ ಹಾಜರು  ಮಾಡಿದ್ದು ಅದರಲ್ಲಿನ ಎಲ್ಲಾ ಸಂಗತಿಗಳು ನನಗೆ ಓದಿ ತಿಳಿಸಿ ಹೇಳಿದ್ದು ಸತ್ಯದಿಂದ ಕೂಡಿದೆ ಹಾಗೂ ಈ ಪ್ರಮಾಣ ಪತ್ರ ವನ್ನು ತಯಾರಿಸಲು ವಕೀಲರಿಗೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು

ಅದನ್ನು ನಿಪಿ 1 ಎಂದು ಮತ್ತು ಅದರಲ್ಲಿನ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಎ ಎಂದು ಗುರುತಿಲಾಯಿತು .

Demenor of the witness the witness appears lost and is very slow in understanding the questions put to him.

(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ ಸ ಅ ರವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು.)

ಪಾಟೀ ಸವಾಲು ಮಾನ್ಯ ಸ ಸ ಅ ರವರಿಂದಃ-

ದಿಃ 29-08-2017 ರಂದು ಬೆಳಗ್ಗೆ 9.30 ಗಂಟೆ ಸಮಯಕ್ಕೆ ನನ್ನ ಮಗ ಕೆ ಎ 14 ಇಜಿ 1577 ನೇ ಮೋಟಾರ್ ಸೈಕಲ್ ನ್ನು ನಿಂಬೆಗಂಡಿ ಗ್ರಾಮಕ್ಕೆ ಬರುತ್ತಿದಾಗ ಎದುರುಗಡೆಯಿಂದ ಅಪೇ ಲಾಗೇಜ್ ಆಟೋ ಸಂಖ್ಯೆ ಕೆ ಎ 17 ಎ 1699 ವಾಹನವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಭರಮಪ್ಪ ಎಂಬುವವರು ಚಾಲನೆ ಮಾಡಿಕೊಂಡು ಬಂದು ನನ್ನ ಮಗನ ಮೋಟಾರ್ ಸೈಕಲ್ ಗೆ ಡಿಕ್ಕಿ ಪಡಿಸಿದ್ದು ನನ್ನ ಮಗನ ವಾಹನ ಮತ್ತು ಆಟೋ ಜಖಃ ಕೊಂಡಿರುತ್ತದೆ ಎಂದರೆಸ ರಿ . ಸದರಿ ಗಾಯಳುವನ್ನು ಉಪಚರಿಸದೆ ವಾಹನ ಚಾಲಕನ್ನು ಓಡಿ ಹೋಗಿರುತ್ತಾನೆ ಎಂದರೆ ಸರಿ . ಅಪಘಾತವನ್ನು ನೋಡಿದ ಕುಮಾರ್ , ಸುರೇಶ . ಮತ್ತು ಕಿರಣ್ ಎಂಬುವವರು ಸೇರಿ ನನ್ನ ಮಗನನ್ನು ಉಪಚಾರಿಸಿ ಮಗನನ್ನು ದಾವಣಗೆರೆ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತಾರೆ ಎಂದರೆ ಸರಿ . ಮಾರ್ಗ ಮಧ್ಯ ಸುಮಾರು 11.00 ಗಂಟೆ ಸಮಯಕ್ಕೆ ನನ್ನ ಮಗ ಮೃತ ಪಟ್ಟಿರುತ್ತಾನೆ ಎಂದರೆ ಸರಿ . ಈ ವಿಷಯವನ್ನು ಕುಮಾರನ್ನು ನನಗೆ ದೂರವಾಣಿ ಕರೆ ಮಾಡಿ ತಿಳಿಸಿರುತ್ತಾನೆ ಎಂದರೆ ಸರಿ .

ನಾನು ದಾವಣಗೆರೆ ಸಿ ಜೆ ಆಸ್ಪತ್ರೆಗೆ ಹೋಗಿ ನನ್ನ ಮಗನ ಮೃತ ದೇಹ ಗುರುತಿಸಿ ಠಾಣೆಯಲ್ಲಿ ದೂರು ದಾಖಲಿಸಿರುತ್ತೇನೆ ಎಂದರೆ ಸರಿ . ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿ .

ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ-

ನಾನು ಅಪಘಾತವದಾಗ ಅರಕೇರೆ ಊರಿನಲ್ಲಿ ಇದ್ದೇನು. ನನಗೆ ಯಾವ ಫೋನ್ ಗೆ ಕರೆ ಬಂತು ಎಂದು ಹೇಳಲಾಗುವುದಿಲ್ಲ . ನಾನು ದೂರವಾಣಿ ಕರೆ ಬಂದ ಕೂಡಲೇ ಆಸ್ಪತ್ರೆಗೆ

ಹೋಗಿರುತ್ತೇನೆ . ಬೆಳಗ್ಗೆನೆ ಹೋಗಿರುತ್ತೇನೆ . ಸುಮಾರು 9.30 ಗೆ ಹೋಗಿರುತ್ತೇನೆ . ನಾನು ಮತ್ತು ನನ್ನ ಮಗಳು ಹೋಗಿರುತ್ತೇನೆ . ಅಪಘಾತ ವಿಚಾರ ನಾನು ಯಾರಿಗೂ ಕೇಳಿರುವುದಿಲ್ಲ . ನಾನು ಶಿವಕುಮಾರ್ ಎಂಬ ವಕೀಲರಿಗೆ ಹೇಳಿರುತ್ತೇನೆ . ನಾನು ದೂರನ್ನು ಠಾಣೆಗೆ ಕೊಟ್ಟಿರುತ್ತೇನೆ ಎಂದರೆ ಸರಿ . ನಿಪಿ 1 ರಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿರುತ್ತದೆ .

ಯಾವ ವಾಹನವು ಅಪಘಾತ ಪಡಿಸಿರುತ್ತದೆಯೇ ಅದರ ಸಂಖ್ಯೆ ನನಗೆ ಗೊತ್ತಿರುವುದಿಲ್ಲ . ನನ್ನ ಮಗನಿಗೆ ವಾಹನ ಪರವಾನಿಗೆ ಇರುವುದಿಲ್ಲ ಎಂದರೆ ಸರಿ . ನನ್ನ ಮಗನಿಗೆ ವಾಹನ ಚಾಲಯಿಸಲು ಬರುತ್ತಿರಲಿಲ್ಲ ಎಂದರೆ ಸರಿಯಲ್ಲ . ನನ್ನ ಮಗ ಚಾಲನೆ ಮಾಡುತ್ತಿದ್ದ ವಾಹನವು ಹಳೆಯ ಗಾಡಿಯಾಗಿದ್ದು ಅದಕ್ಕೆ ಫಿಟ್ ನೆಸ್ ಇರಲಿಲ್ಲ ಎಂದರೆ ಸರಿಯಲ್ಲ . ನನ್ನ ಮಗ ಸ್ವತಃ ಸ್ಕಿಡ್ ಆಗಿ ಬಿದಿರುತ್ತಾನೆ ಎಂದರೆ ಸರಿಯಲ್ಲ . ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ . ನನ್ನ ದೂರಿನಲ್ಲಿ ನನ್ನ ಮಗ ವಾಹನದಿಂದ ಸ್ಕಿಡ್ ಆಗಿ ಬಿದ್ದಿರುತ್ತಾನೆ ಎಂದು ತಿಳಿಸಿರುತ್ತೇನೆಂದರೆ ಸರಿಯಲ್ಲ .  ನಾನು ಮತ್ತು ನನ್ನ ಮಕ್ಕಳು ಸೇರಿ ಅಪಘಾತ ಪರಿಹಾರ ಕೋರಿ ಅರ್ಜಿ ಸಲ್ಲಿಸಿದ್ದು ಅದರ ಸಂಖ್ಯೆ ಎಂ ವಿ ಸಿ 674/2018  ಸಿ ಜೆ ಎಂ ನ್ಯಾಯಾಲಯ ದಾವಣಗೆರೆ ಎಂದರೆ ಸರಿಯಲ್ಲ . ಅದರಲ್ಲಿ  ನಾನು 2 ನೇ ಅರ್ಜಿದಾರರಿದ್ದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ , ಇದಲ್ಲದೇ ಎಂ ವಿ ಸಿ 96/2020-21 ರಂತೆ ಭದ್ರಾವತಿಯಲ್ಲಿ ಆರೋಪಿ ವಿರುದ್ಧ ಮತ್ತೊಂದು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿ. ನಾನು ಬಾತಿಯಲ್ಲಿ ಇದ್ದರು ಸಹ ಭದ್ರಾವತಿ ನ್ಯಾಯಾಲಯದಲ್ಲಿ ಸುಳ್ಳು ಪ್ರಕರಣದ ಹೂಡಿರುತ್ತೇನೆಂದರೆ ಸರಿಯಲ್ಲ . ಸದರಿ ಪ್ರಕರಣವು ವಜಾವಾಗಿರುತ್ತದೆ ಎಂದರೆ  ಸರಿಯಲ್ಲ .

ಆರೋಪಿಯು ಅಜಾಗರೂಕತೆಯಿಂದ ವಾಹನವನ್ನು ಚಾಲನೆ ಮಾಡಿ ಸದರಿ ದಿನ ಸದರಿ ದಾರಿಯಲ್ಲಿ ಬರದ್ದೆ ಇದ್ದರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಅಣ್ಣತಮ್ಮಂದಿರು ಬಾತಿಯಲ್ಲಿ ವಾಸಸಿದ್ದಾರೆ.  ಅವರ ಹೆಸರು ಗಣೇಶಯ್ಯ . ಭರಮಪ್ಪ ಮತ್ತು ನಾನು ಹೊನ್ನಾಳಿ ಠಾಣೆಗೆ   ಹೋಗಿ ದೂರು ಕೊಟ್ಟಿರುತ್ತೇನೆ . ನಾನು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿದ್ದು ಪರಿಹಾರ ಕೋರುತ್ತಿದ್ದೇನೆಂದರೆ ಸರಿಯಲ್ಲ . ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿರುವುದಾಗಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ . ಯಾವುದೇ ಅಪಘಾತವಾಗಿರುವುದಿಲ್ಲ ಎಂದರೆ ಸರಿಯಲ್ಲ . ಆರೋಪಿಯು ಅತಿ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿ ಅಪಘತಾ ಪಡಿಸಿರುವುದಾಗಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ . ಯಾರು ಅಪಘಾತವನ್ನು ನೋಡಿರುವುದಿಲ್ಲ ಎಂದರೆ ಸರಿಯಲ್ಲ . ಈ ಪ್ರಕಣಕ್ಕೂ

ಮತ್ತು ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ . ನಾನು 2 ಪ್ರಕಣಗಳನ್ನು ಆರೋಪಿ ವಿರುದ್ಧ ಸುಳ್ಳಿನಿಂದ ಹೂಡಿ ಅವರಿಗೆ ಮಾನಸಿಕ ಹಿಂಸೆ ಕೊಟ್ಟಿರುತ್ತೇನೆಂದರೆ ಸರಿಯಲ್ಲ . ನಾನು ಸುಳ್ಳು ಪ್ರಕರಣ ಹೂಡಿರುತ್ತೇನೆಂದರೆ ಸರಿಯಲ್ಲ .

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ಹೊನ್ನಾಳಿ.